78

ಭ್ರೂಣ ಬೆಳವಣಿಗೆ
ಮತ್ತು
ಕುರ್‌ಆನ್



الحركة النصيحة الإسلامية

ANNASEEHA ISLAMIC MOVEMENT

Suratkal, Mangalore - 575014

74118 55190 / 97315 93091

ಮಾನವನ ಭ್ರೂಣ ಬೆಳವಣಿಗೆಯ ಬಗ್ಗೆ ಕುರ್‌ಆನ್ ಏನು ಹೇಳುತ್ತದೆ?


"ಖಂಡಿತವಾಗಿಯೂ ನಾವು ಮನುಷ್ಯನನ್ನು ಜೇಡಿ-ಮಣ್ಣಿನ ಸತ್ವದಿಂದ ಸೃಷ್ಟಿಸಿದೆವು. ನಂತರ ಅವನನ್ನು ಒಂದು ಬಿಂದುವನ್ನಾಗಿ ಮಾಡಿ ಭದ್ರವಾದ ಒಂದು ಸ್ಥ-ಳದಲ್ಲಿಟ್ಟೆವು. ನಂತರ ಆ ಬಿಂದುವನ್ನು ನಾವು 'ಅಲಕ' (ಜಿಗಣೆ, ತೂಗು ಹಾಕಲಾದ ವಸ್ತು ಮತ್ತು ಹೆಪ್ಪುಗಟ್ಟಿದ ರಕ್ತ)ವಾಗಿ ಮಾಡಿದೆವು. ನಂತರ 'ಅಲಕ'ವನ್ನು ನಾವು 'ಮುದ್ಗ' (ಜಗಿಯಲಾದ ವಸ್ತು)ವಾಗಿ ಮಾಡಿದೆವು...." (ಕುರ್‌ಆನ್ 23:12-14)

'ಅಲಕ'

'ಅಲಕ' ಎಂಬ ಅರೇಬಿಕ್ ಪದಕ್ಕೆ ಮೂರು ಅರ್ಥಗಳಿವೆ: (1) ಜಿಗಣೆ, (2) ತೂಗು ಹಾಕಲಾದ ವಸ್ತು ಮತ್ತು (3) ಹೆಪ್ಪುಗಟ್ಟಿದ ರಕ್ತ. ಈ ಮೂರು ಅರ್ಥಗಳೂ ಬೆಳವಣಿ-

ಗೆಯ ಪ್ರಾರಂಭಿಕ ಹಂತದಲ್ಲಿರುವ ಭ್ರೂಣದೊಂದಿಗೆ ಸರಿಯಾಗಿ ತಾಳೆಯಾಗುತ್ತದೆ.


ಭ್ರೂಣ ಬೆಳವಣಿಗೆಯ ಪ್ರಾರಂಭ ಹಂತದಲ್ಲಿ ಭ್ರೂಣ-ವನ್ನು ಜಿಗಣೆಯೊಂದಿಗೆ ಹೋಲಿಸಿದರೆ ಎರಡರಲ್ಲೂ ಹೋಲಿಕೆಯನ್ನು ಕಾಣಬಹುದು.[1] (ನೋಡಿ: ಚಿತ್ರ 1).



ಚಿತ್ರ 1. ಅಲಕದ ಹಂತದಲ್ಲಿ ಜಿಗಣೆ ಮತ್ತು ಮನುಷ್ಯ ಭ್ರೂಣಗಳ ಮಧ್ಯೆ ಇರುವ ಸಾಮ್ಯತೆಯನ್ನು ಸೂಚಿಸುವ ರೇಖಾಚಿತ್ರಗಳು

1 The Developing Human, Moore and Persaud, 5th ed., p. 8.


ಮಾತ್ರವಲ್ಲದೆ, ಈ ಹಂತದಲ್ಲಿ ಭ್ರೂಣಕ್ಕೆ ಪೋಷಣೆ ದೊರಕುವುದು ತಾಯಿಯ ರಕ್ತದಿಂದ. ಇದು ಕೂಡ ಜಿಗಣೆಯಂತೆ. ಏಕೆಂದರೆ ಜಿಗಣೆ ಅನ್ಯರ ರಕ್ತದಿಂದ ಪೋಷಣೆ ಪಡೆಯುತ್ತದೆ.[2]



ಚಿತ್ರ 2. ಅಲಕದ ಹಂತದಲ್ಲಿ ಭ್ರೂಣವು ತಾಯಿಯ ಗರ್ಭಕೋಶಕ್ಕೆ ತೂಗಿಕೊಂಡಿರುವುದನ್ನು ಈ ಚಿತ್ರದಲ್ಲಿ ಕಾಣಬಹುದು.

2 Human Development as Described in the Qur’an and Sunnah, Moore and others, p. 36.

'ಅಲಕ' ಎಂಬ ಪದದ ಎರಡನೆ ಅರ್ಥ 'ತೂಗುಹಾಕಲಾದ ವಸ್ತು'. ಚಿತ್ರ 2 ಮತ್ತು 3ರಲ್ಲಿರುವಂತೆ, ಪ್ರಾರಂಭ ಹಂತದಲ್ಲಿ ಭ್ರೂಣ ತಾಯಿಯ ಗರ್ಭಕ್ಕೆ ತೂಗಿಕೊಂಡಿರುತ್ತದೆ.



ಚಿತ್ರ 3. ಅಲಕದ ಹಂತದಲ್ಲಿ (ಭ್ರೂಣಕ್ಕೆ ಸುಮಾರು 15 ದಿನಗಳಾಗುವಾಗ) ಭ್ರೂಣವು (B) ತಾಯಿಯ ಗರ್ಭಾಶಯಕ್ಕೆ ತೂಗಿಕೊಂಡಿರುವುದನ್ನು ಸೂಕ್ಷ್ಮದರ್ಶಕದಿಂದ ತೆಗೆದ ಈ ಚಿತ್ರದಲ್ಲಿ ಕಾಣಬಹುದು. ಈ ಹಂತದಲ್ಲಿ ಭ್ರೂಣದ ಗಾತ್ರವು 0.6 ಮಿ.ಮೀ. ಮಾತ್ರವಾಗಿದೆ.

'ಅಲಕ' ಎಂಬ ಪದದ ಮೂರನೆ ಅರ್ಥ 'ಹೆಪ್ಪುಗಟ್ಟಿದ ರಕ್ತ'. ಪ್ರಾರಂಭ ಹಂತದಲ್ಲಿ ಭ್ರೂಣ ಮತ್ತು ಅದರ ಚೀಲಗಳ ಬಾಹ್ಯ ರೂಪವು ಹೆಪ್ಪುಗಟ್ಟಿದ ರಕ್ತವನ್ನು ಹೋಲುತ್ತದೆ. ಈ ಹಂತದಲ್ಲಿ ಹೇರಳ ಪ್ರಮಾಣದಲ್ಲಿರುವ ರಕ್ತವು ಭ್ರೂಣದಲ್ಲಿ ಕಂಡುಬರುವುದೇ ಇದಕ್ಕೆ ಕಾರಣ.[3] (ನೋಡಿ: ಚಿತ್ರ 4). ಮಾತ್ರವಲ್ಲದೆ, ಈ ಹಂತದಲ್ಲಿ ಭ್ರೂಣದಲ್ಲಿರುವ ರಕ್ತವು ಮೂರನೇ ವಾರದ ಅಂತ್ಯದ ತನಕ ಪರಿಚಲನೆಯಾಗುವುದಿಲ್ಲ.[4] ಆದ್ದರಿಂದ ಈ ಹಂತದಲ್ಲಿ ಭ್ರೂಣವು ಹೆಪ್ಪುಗಟ್ಟಿದ ರಕ್ತದಂತೆ ಇರುತ್ತದೆ.


ಒಟ್ಟಿನಲ್ಲಿ 'ಅಲಕ' ಎಂಬ ಪದಕ್ಕಿರುವ ಮೂರು ಅರ್ಥಗಳೂ, ಪ್ರಾರಂಭ ಹಂತದಲ್ಲಿರುವ ಭ್ರೂಣದೊಂದಿಗೆ ಕರಾ-

---

3 Human Development as Described in the Qur'an and Sunnah, Moore and others, pp. 37-38

4 The Developing Human, Moore and Persaud, 5th ed., p. 65.

ರುವಾಕ್ಕಾಗಿ ತಾಳೆಯಾಗುತ್ತದೆ. ಈ ಹಂತವನ್ನು ಪವಿತ್ರ ಕುರ್‌ಆನ್ 'ಅಲಕ'ದ ಹಂತ ಎಂದು ಕರೆಯುತ್ತದೆ.



ಚಿತ್ರ 4. ಅಲಕದ ಹಂತದಲ್ಲಿ ಭ್ರೂಣದಲ್ಲಿರುವ ಪ್ರಾಥಮಿಕ ಹೃದಯ ರಕ್ತನಾಳದ ವ್ಯವಸ್ಥೆ. ಭ್ರೂಣ ಮತ್ತು ಅದರ ಚೀಲಗಳ ಬಾಹ್ಯ ರೂಪವು ಹೆಪ್ಪುಗಟ್ಟಿದ ರಕ್ತವನ್ನು ಹೋಲುತ್ತದೆ. ಈ ಹಂತದಲ್ಲಿ ಹೇರಳ ಪ್ರಮಾಣದಲ್ಲಿರುವ ರಕ್ತ ಭ್ರೂಣದಲ್ಲಿ ಕಂಡುಬರುವುದೇ ಇದಕ್ಕಿರುವ ಕಾರಣ.

ಮುದ್ಗ


ಕುರ್‌ಆನ್‌ನಲ್ಲಿ ಪ್ರಸ್ತಾಪಿಸಲಾದ ಭ್ರೂಣ ಬೆಳವಣಿಗೆಯ ಮುಂದಿನ ಹಂತವು 'ಮುದ್ಗ' ಎಂಬ ಹಂತ. 'ಮುದ್ಗ'

ಎಂಬ ಅರೇಬಿಕ್ ಪದದ ಅರ್ಥ 'ಜಗಿಯಲಾದ ವಸ್ತು'. ನಾವು ಒಂದು ತುಂಡು ಅಂಟನ್ನು (ಚ್ಯೂಯಿಂಗ್ ಗಂ) ಬಾಯಲ್ಲಿಟ್ಟು ಜಗಿದು, ನಂತರ 'ಮುದ್ಗ'ದ ಹಂತದಲ್ಲಿರುವ ಭ್ರೂಣದೊಂದಿಗೆ ಅದನ್ನು ಹೋಲಿಸಿದರೆ, 'ಮುದ್ಗ'ದ ಹಂತದಲ್ಲಿರುವ ಭ್ರೂಣವು ಆ ಜಗಿದ ವಸ್ತುವಿನೊಂದಿಗೆ ಹೋಲಿಕೆಯಾಗುವುದನ್ನು ಕಾಣಬಹುದು. ಭ್ರೂಣದ ಬೆನ್ನಿನ ಭಾಗದಲ್ಲಿರುವ ಕಾಯಖಂಡಗಳು (somites) ಜಗಿಯಲಾದ ವಸ್ತುವಿನಲ್ಲಿ ಮೂಡುವ ಹಲ್ಲಿನ ಗುರುತುಗಳನ್ನು ಹೋಲುವುದೇ ಇದಕ್ಕೆ ಕಾರಣ.[5] (ನೋಡಿ ಚಿತ್ರ 5 ಮತ್ತು 6).


ವಿಜ್ಞಾನಿಗಳು ಅತ್ಯಾಧುನಿಕ ಉಪಕರಣ ಮತ್ತು ಶಕ್ತಿಶಾಲಿ ಸೂಕ್ಷ್ಮದರ್ಶಕಗಳ ಸಹಾಯದಿಂದ ತೀರಾ ಇತ್ತೀಚೆಗೆ ಸಂಶೋಧಿಸಿದ ಈ ಸತ್ಯವನ್ನು ಮುಹಮ್ಮದ್(ಸ) ರವರು

5 The Developing Human, Moore and Persaud, 5th ed, p 8

ಹದಿನಾಲ್ಕು ಶತಮಾನಗಳ ಹಿಂದೆಯೇ ತಿಳಿದಿರಲು ಹೇಗೆ ಸಾಧ್ಯ? ಹ್ಯಾಮ್ ಮತ್ತು ಲ್ಯೂವನ್‌ಹೋಕ್ ಎಂಬ ವಿ-



ಚಿತ್ರ 5. ಮುದ್ಗದ ಹಂತದಲ್ಲಿರುವ 28 ದಿನಗಳ ಭ್ರೂಣ. ಈ ಹಂತದಲ್ಲಿ ಭ್ರೂಣವು ಜಗಿಯಲಾದ ವಸ್ತುವಿನ ರೂಪವನ್ನು ಹೊಂದಿರುತ್ತದೆ. ಭ್ರೂಣದ ಬೆನ್ನಿನ ಭಾಗದಲ್ಲಿರುವ ಕಾಯಖಂಡಗಳು ಜಗಿದ ವಸ್ತುವಿನಲ್ಲಿ ಮೂಡುವ ಹಲ್ಲಿನ ಗುರುತುಗಳನ್ನು ಹೋಲುವುದೇ ಇದಕ್ಕೆ ಕಾರಣ. ಭ್ರೂಣದ ನಿಜ ಗಾತ್ರ 4 ಮಿ.ಮೀ.



ಚಿತ್ರ 6. ಮುದ್ಗದ ಹಂತದಲ್ಲಿರುವ ಭ್ರೂಣದ ರೂಪವನ್ನು ಜಗಿಯಲಾದ ಒಂದು ತುಂಡು ಅಂಟಿನೊಂದಿಗೆ ಹೋಲಿಸಿದರೆ ಅವೆರಡರ ಮಧ್ಯೆಯೂ ಸಾಮ್ಯತೆಯನ್ನು ಕಾಣಬಹುದು. A. ಮುದ್ಗದ ಹಂತದಲ್ಲಿರುವ ಭ್ರೂಣದ ರೇಖಾಚಿತ್ರ. ಭ್ರೂಣದ ಬೆನ್ನಿನ ಭಾಗದಲ್ಲಿರುವ ಕಾಯಖಂಡಗಳು ಹಲ್ಲಿನ ಗುರುತನ್ನು ಹೊಂದಿರುವುದನ್ನು ಕಾಣಬಹುದು. B. ಜಗಿಯಲಾದ ಒಂದು ತುಂಡು ಅಂಟಿನ ಚಿತ್ರ

ಜ್ಞಾನಿಗಳು 1677ರಲ್ಲಿ (ಮುಹಮ್ಮದರ(ಸ) ಕಾಲಾನಂತರ ಸುಮಾರು 1000 ವರ್ಷಗಳ ಬಳಿಕ) ಸುಧಾರಿತ ಸೂಕ್ಷ್ಮದರ್ಶಕದ ನೆರವಿನಿಂದ ಮನುಷ್ಯ ವೀರ್ಯಕೋಶಗಳನ್ನು (spermatozoa) ಮೊಟ್ಟಮೊದಲ ಬಾರಿಗೆ ನೋಡಿದರು. ವೀರ್ಯಕೋಶದಲ್ಲಿ ಅತಿಸೂಕ್ಷ್ಮವಾದ ಮನುಷ್ಯ ರೂಪವಿದ್ದು ಅದನ್ನು ಹೆಣ್ಣಿನ ಜನನಾಂಗದಲ್ಲಿ ನಿಕ್ಷೇಪಿಸಿದಾಗ ಅದು ಶಿಶುವಾಗಿ ಬೆಳೆಯುತ್ತದೆಂದು ಅವರು ತಪ್ಪಾಗಿ ತಿಳಿದುಕೊಂಡಿದ್ದರು.[6]

ವಿಶ್ರಾಂತ ಪ್ರೊಫೆಸ್ಸರ್ ಕೀತ್ ಎಲ್. ಮೂರ್ ಅಂಗರಚನಾಶಾಸ್ತ್ರ ಮತ್ತು ಭ್ರೂಣಶಾಸ್ತ್ರ ಕ್ಷೇತ್ರದಲ್ಲಿ ಜಗತ್ತಿನ ಪ್ರಮುಖ ವಿಜ್ಞಾನಿಗಳ ಪೈಕಿ ಒಬ್ಬರು. ಇವರು ಬರೆದ 'ದಿ ಡೆವಲಪಿಂಗ್ ಹ್ಯೂಮನ್' ಎಂಬ ಪುಸ್ತಕವು ಜಗತ್ತಿನ ಎಂಟು ಭಾಷೆಗಳಿಗೆ ಭಾಷಾಂತರವಾಗಿದೆ. ಈ

6 The Developing Human, Moore and Persaud, 5th ed, p 9

ಪುಸ್ತಕವು ವೈಜ್ಞಾನಿಕ ಪರಾಮರ್ಶನಾ ಪುಸ್ತಕವಾಗಿರುವುದು ಮಾತ್ರವಲ್ಲದೆ, ಒಬ್ಬನೇ ಲೇಖಕನಿಂದ ಬರೆಯಲಾದ ಅತ್ಯುತ್ತಮ ಪುಸ್ತಕವೆಂದು ಅಮೇರಿಕಾದ ವಿಶೇಷ ಸಮಿತಿಯೊಂದು ಈ ಪುಸ್ತಕವನ್ನು ಆರಿಸಿದೆ. ಡಾ. ಕೀತ್ ಮೂರ್ ಕೆನಡಾದ ಟೊರೊಂಟೋದಲ್ಲಿರುವ ಟೊರೊಂಟೋ ವಿಶ್ವವಿದ್ಯಾಲಯದಲ್ಲಿ ಅಂಗರಚನಾಶಾಸ್ತ್ರ ಮತ್ತು ಕೋಶ ಜೀವಶಾಸ್ತ್ರದ ವಿಶ್ರಾಂತ ಪ್ರಾಧ್ಯಾಪಕರು. ಅಲ್ಲಿ ಅವರು ಫಾಕಲ್ಟಿ ಆಫ್ ಮೆಡಿಸಿನ್‌ನಲ್ಲಿ ಬೇಸಿಕ್ ಸಯನ್ಸ್‌ನ ಸಹಾಯಕ ಡೀನ್ ಆಗಿದ್ದರು. ಕೆನಡಾದಲ್ಲಿ ಅಂಗರಚನಾಶಾಸ್ತ್ರ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದವರಿಗೆ ನೀಡಲಾಗುವ ಅತಿ ಪ್ರತಿಷ್ಠಿತ ಜೆ. ಸಿ. ಬಿ. ಗ್ರಾಂಟ್ ಅವಾರ್ಡನ್ನು ಕೆನಡಿಯನ್ ಅಸೋಸಿಯೇಶನ್ ಆಫ್ ಅನಾಟಮಿಸ್ಟ್ಸ್ ಸಂಸ್ಥೆಯಿಂದ 1984ರಲ್ಲಿ ಪಡೆದರು. ಕೆನಡಿಯನ್ & ಅಮೇರಿಕನ್ ಅಸೋಸಿಯೇಶನ್ ಆಫ್ ಅನಾಟಮಿಸ್ಟ್ಸ್, ಕೌನ್ಸಿಲ್ ಆಫ್ ದಿ ಯೂನಿಯನ್ ಆಫ್ ಬಯಾಲಜಿಕಲ್

ಸಯನ್ಸಸ್ ಮೊದಲಾದ ಅನೇಕ ಅಂತರಾಷ್ಟ್ರೀಯ ಸಂಸ್ಥೆಗಳಿಗೆ ಅವರು ನಿರ್ದೇಶಕರಾಗಿ ದುಡಿದಿದ್ದಾರೆ.

1981ರಲ್ಲಿ, ಸೌದಿ ಅರೇಬಿಯಾದ ದಮ್ಮಾಮ್ ನಗರದಲ್ಲಿ ಜರುಗಿದ ಏಳನೇ ವೈದ್ಯಕೀಯ ಸಮ್ಮೇಳನದಲ್ಲಿ ಪ್ರೊ. ಮೂರ್ ಹೀಗೆಂದರು: "ಮಾನವ ಬೆಳವಣಿಗೆಯ ಬಗ್ಗೆ ಪವಿತ್ರ ಕುರ್‌ಆನಿನಲ್ಲಿರುವ ವಚನಗಳಿಗೆ ವಿವರಣೆ ನೀಡುವುದರಲ್ಲಿ ಸಹಾಯ ಮಾಡಲು ನನಗೆ ಅತ್ಯಂತ ಸಂತಸವಾಗುತ್ತಿದೆ. ಈ ವಚನಗಳು ಮುಹಮ್ಮದರಿಗೆ ದೇವನಿಂದಲೇ ಬಂದಿರಲು ಸಾಧ್ಯ ಎಂದು ನನಗೆ ಅತ್ಯಂತ ಸ್ಪಷ್ಟವಾಗಿದೆ. ಏಕೆಂದರೆ ಬಹುತೇಕ ಈ ಎಲ್ಲ ಜ್ಞಾನಗಳನ್ನೂ ಅನೇಕ ಶತಮಾನಗಳ ತನಕವೂ ಸಂಶೋಧಿಸಲಾಗಿರಲಿಲ್ಲ. ಮುಹಮ್ಮದ್ ದೇವನ ಸಂದೇಶವಾಹಕರು ಎಂದು ಇದು ನನಗೆ ರುಜುವಾತುಪಡಿಸಿಕೊಡುತ್ತದೆ."

ಪ್ರೊ. ಮೂರ್‌ರೊಂದಿಗೆ ಕೇಳಲಾಯಿತು: "ಕುರ್‌ಆನ್ ದೈವಿಕ ವಚನವೆಂದು ನೀವು ನಂಬುತ್ತೀರಿ ಎಂದೇ

ನಿಮ್ಮ ಈ ಹೇಳಿಕೆಯ ಅರ್ಥ?" ಅವರು ಉತ್ತರಿಸಿದರು: "ಅದನ್ನು ದೈವಿಕವೆಂದು ಅಂಗೀಕರಿಸಲು ನನಗೆ ಯಾವುದೇ ಕಷ್ಟವಿಲ್ಲ."

ಇನ್ನೊಂದು ಸಮ್ಮೇಳನದಲ್ಲಿ ಪ್ರೊ. ಮೂರ್ ಹೇಳಿದರು: "ಬೆಳವಣಿಗೆಯ ಹಂತದಲ್ಲಿ ಪದೇ ಪದೇ ಬದಲಾವಣೆಗಳಿಗೆ ಒಳಗಾಗುವ ಕಾರಣ ಮಾನವ ಭ್ರೂಣಗಳ ಹಂತೀಕರಣವು (staging) ಸಂಕೀರ್ಣವಾಗಿದೆ. ಆದ್ದರಿಂದ ಕುರ್‌ಆನ್ ಮತ್ತು ಪ್ರವಾದಿ ವಚನಗಳಲ್ಲಿ ಪ್ರಸ್ತಾಪಿಸಲಾದ ಪಾರಿಭಾಷಿಕ ಪದಗಳನ್ನು ಬಳಸಿ ವರ್ಗೀಕರಣದ ಹೊಸ ವ್ಯವಸ್ಥೆಯೊಂದನ್ನು ಅಭಿವೃದ್ಧಿಪಡಿಸುವ ವಿಚಾರವನ್ನು ಮಂಡಿಸಲಾಗುತ್ತಿದೆ. ಈ ವ್ಯವಸ್ಥೆಯು ಸರಳವೂ, ಗ್ರಾಹ್ಯವೂ, ಪ್ರಸಕ್ತ ಭ್ರೂಣಶಾಸ್ತ್ರೀಯ ಜ್ಞಾನದೊಂದಿಗೆ ಸರಿಯಾಗಿ ತಾಳೆಯಾಗುವಂತದ್ದೂ ಆಗಿದೆ. ನಾಲ್ಕು ವರ್ಷಗಳ ಕಾಲ ನಡೆಸಿದ ಕುರ್‌ಆನ್ ಮತ್ತು ಹದೀಸ್‌ಗಳ ಆಳ ಅಧ್ಯಯನವು ನನಗೆ ಮಾನವ ಭ್ರೂಣಗಳನ್ನು

ವರ್ಗೀಕರಿಸುವ ವ್ಯವಸ್ಥೆಯೊಂದನ್ನು ತೋರಿಸಿಕೊಟ್ಟಿದೆ. ಇದು ನಿಜಕ್ಕೂ ಅದ್ಭುತ! ಏಕೆಂದರೆ ಈ ವ್ಯವಸ್ಥೆಯು ದಾಖಲಿಸಲ್ಪಟ್ಟಿರುವುದು 7ನೇ ಶತಮಾನದಲ್ಲಿ. ಭ್ರೂಣಶಾಸ್ತ್ರದ ಜನಕ ಅರಿಸ್ಟಾಟಲ್ ಕ್ರಿ.ಪೂ. 4ನೇ ಶತಮಾನದಲ್ಲಿ ಕೋಳಿ ಮೊಟ್ಟೆಗಳ ಮೇಲೆ ನಡೆಸಿದ ಅಧ್ಯಯನದಿಂದ ಕೋಳಿ ಮರಿಗಳ ಭ್ರೂಣವು ಹಂತ ಹಂತವಾಗಿ ಬೆಳೆಯುತ್ತದೆ ಎಂಬುದನ್ನು ಅರಿತುಕೊಂಡಿದ್ದರೂ ಸಹ, ಈ ಹಂತಗಳ ಬಗ್ಗೆ ಯಾವುದೇ ಮಾಹಿತಿಯನ್ನು ಒದಗಿಸಲು ಆತನಿಗೆ ಸಾಧ್ಯವಾಗಿರಲಿಲ್ಲ. ಭ್ರೂಣಶಾಸ್ತ್ರದ ಇತಿಹಾಸದ ಬಗ್ಗೆ ನಮಗೆ ಗೊತ್ತಿರುವ ಪ್ರಕಾರ 20ನೇ ಶತಮಾನದ ತನಕ ಮಾನವ ಭ್ರೂಣಗಳ ಹಂತೀಕರಣ ಮತ್ತು ವರ್ಗೀಕರಣಗಳ ಬಗ್ಗೆ ಅತ್ಯಲ್ಪವನ್ನು ಮಾತ್ರ ನಾವು ತಿಳಿದಿದ್ದೆವು. ಈ ಕಾರಣದಿಂದಾಗಿ, ಮನುಷ್ಯ ಭ್ರೂಣದ ಬಗ್ಗೆ ಕುರ್‌ಆನ್‌ನಲ್ಲಿರುವ ವಿವರಣೆಗಳು ಏಳನೇ ಶತಮಾನದ ವೈಜ್ಞಾನಿಕ ಜ್ಞಾನದ ಆಧಾರದಲ್ಲಾಗಿರಲು ಸಾಧ್ಯವೇ ಇಲ್ಲ.

ಇದಕ್ಕಿರುವ ಒಂದೇ ಒಂದು ವೈಚಾರಿಕ ಉತ್ತರ: ಈ ವಿವರಣೆಗಳು ಮುಹಮ್ಮದರಿಗೆ ಅವತೀರ್ಣವಾಗಿರುವುದು ದೇವನಿಂದ. ಮುಹಮ್ಮದ್ ಒಬ್ಬ ಅನಕ್ಷರಸ್ಥ ವ್ಯಕ್ತಿಯಾಗಿರುವುದರಿಂದ ಮತ್ತು ವೈಜ್ಞಾನಿಕವಾದ ಯಾವುದೇ ತರಬೇತಿಯೂ ಅವರಿಗೆ ಸಿಗದಿರುವುದರಿಂದ ಅವರು ಈ ವಿವರಣೆಗಳನ್ನು ಸ್ವಯಂ ತಿಳಿದುಕೊಂಡರೆಂದು ಹೇಳುವುದು ಸಾಧ್ಯವಿಲ್ಲ."